**WITNESS IS PRESENT AND DULY SWORN ON 21-11-2019.**

**FURTHER EXAMINATION IN CHIEF, BY SRI.SRK ADVOCATE FOR THE PLAINTIFF:**

I have filed my Examination in Chief affidavit before this court. It bears my signature. The contents of the same are true and correct. In support of my case, I have produced following documents.

Documents are marked as under:

1. Certified copy of the sale deed dated 10-12-1982 **marked as Ex.P.1**.
2. Original sale deed 20-07-2013 marked as **Ex.P.2.**
3. Original gift deed dated 20-03-2015 marked as **Ex.P.3**

(Prays time for further Examination in Chief. Granted).

(Typed to my dictation in open Court)

R.O.I. & A.C.

**( RAJESHWARA )**
**LXIV Addl. City Civil & Sessions Judge**
**Bengaluru City (CCH-65).**

**WITNESS IS PRESENT AND DULY SWORN ON 05-10-2021.**

**FURTHER EXAMINATION IN CHIEF, BY SRI. HK Srinivas ADVOCATE FOR THE PLAINTIFF:**

I have filed following documents which may be marked on my behalf. Documents are marked as under:

1. EC for the period 01-04-2004 to 15-02-2020 is marked at **Ex.P.4**.
2. Certified copy of the Khata certificate is marked at **Ex.P.5**.
3. Certified copy of Assessment Demand Register Extract is marked at **Ex.P.6**.
4. Tax paid receipt for the period 2019-20 is marked at **Ex.P.7**.
5. Tax paid receipt for the period 2020-10 is marked at **Ex.P.8**. (Subject to production of certificate U/s.65(B) of Indian Evidence Act).

(Prays time. For further Examination in Chief )

(Typed to my dictation in open Court)

R.O.I. & A.C.

**( RAJESHWARA )**
**LXIV Addl. City Civil & Sessions Judge**
**Bengaluru City (CCH-65).**

**ದಿನಾಂಕ 27-03-2024 ರಂದು ಸಾಕ್ಷಿ ಹಾಜರಿರುತ್ತಾರೆ. ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಕೆ.ಆರ್.ಸಿ. 6 ಮತ್ತು 7 ನೇ ಪ್ರತಿವಾದಿ ಪರ ವಕೀಲರಿಂದ :**

1. ಪ್ರತಿವಾದಿ ನಂ.1-ಶಾಂತಮ್ಮ ನನ್ನ ತಾಯಿ. ಪ್ರತಿವಾದಿ ನಂ.1-ಶಾಂತಮ್ಮ ನನ್ನ ತಾಯಿ ಎಂದು ತೋರಿಸುವ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ದಾನಪತ್ರವನ್ನು ಹಾಜರುಪಡಿಸಿದ್ದೇನೆ. ಪ್ರತಿವಾದಿ ನಂ.1-ಶಾಂತಮ್ಮ ನನ್ನ ತಾಯಿ ಅಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನಂ.1-ಶಾಂತಮ್ಮ ನನ್ನ ತಾಯಿ ಎಂದು ತೋರಿಸಲು ದಾನಪತ್ರವನ್ನು ಹೊರತುಪಡಿಸಿ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಈ ದಾವೆಯಲ್ಲಿ ನಾನು ಯಾವುದೇ ಸಾಕ್ಷಿದಾರರ ಸಾಕ್ಷ್ಯ ಕೊಡುವುದಿಲ್ಲ.

2. 1 ನೇ ಪ್ರತಿವಾದಿ ದಾವಾಸ್ವತ್ತನ್ನು ಖರೀದಿಸುವ ಸಮಯದಲ್ಲಿ ಯಾವ ವ್ಯವಹಾರಗಳಾಗಿವೆ ಎಂದು ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. 3 ರಿಂದ 5 ನೇ ಪ್ರತಿವಾದಿಯರು ದಾವಾಸ್ವತ್ತನ್ನು ನನ್ನ ತಾಯಿಗೆ ಮಾರಾಟ ಮಾಡಿದರು. ದಾವಾಸ್ವತ್ತು ಮೂಲತಃ 3 ರಿಂದ 5 ನೇ ಪ್ರತಿವಾದಿಯರಿಗೆ ಸೇರಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸ್ವತ್ತನ್ನು 3 ನೇ ಪ್ರತಿವಾದಿಯ ಗಂಡನಾದ ಗುರುಪ್ರಸಾದರವರಿಗೆ ಸೇರಿತ್ತು ಎಂದರೆ ಸರಿ. 3 ರಿಂದ 5 ನೇ ಪ್ರತಿವಾದಿಗಳಿಗೆ ದಾವಾಸ್ವತ್ತನ್ನು ಮಾರಾಟ ಮಾಡುವ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ.

3. ಪ್ರತಿವಾದಿ ನಂ.1-ಶಾಂತಮ್ಮ ನಿವೃತ್ತ ಶಿಕ್ಷಕಿಯಾಗಿದ್ದರು. ಪ್ರತಿವಾದಿ ನಂ.1-ಶಾಂತಮ್ಮನವರ ಬಳಿ ದಾವಾಸ್ವತ್ತಿನ ಪ್ರತಿಫಲವಾದ ರೂ.30 ಲಕ್ಷ ಪಾವತಿಸುವ ಆರ್ಥಿಕ ಸಾಮರ್ಥ್ಯ ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ-2-ಕ್ರಯಪತ್ರದಲ್ಲಿ ಉಲ್ಲೇಖಿಸಿರುವಂತೆ ಮಾರಾಟಗಾರರು ನನ್ನ ತಾಯಿಗೆ ಹಸ್ತಾಂತರಿಸಿರುವ ದಾವಾಸ್ವತ್ತಿನ ಮೂಲ ದಾಖಲಾತಿಗಳು ಎಲ್ಲಿವೆ ಎಂದರೆ ಸಾಕ್ಷಿ ಉತ್ತರಿಸಿರುವುದಿಲ್ಲ. ನಿಪಿ-1-ಕ್ರಯಪತ್ರದ ಮೂಲ ದಾಖಲಾತಿ ಯಾರ ಬಳಿ ಇದೆ ಎಂದರೆ ಗೊತ್ತಿಲ್ಲ.

4. 3 ನೇ ಪ್ರತಿವಾದಿಯ ಗಂಡ ಗುರುಪ್ರಸಾದರವರು 1997 ನೇಯ ಇಸವಿಯಲ್ಲಿ 6 ಮತ್ತು 7 ನೇ ಪ್ರತಿವಾದಿ ಹಣಕಾಸು ಸಂಸ್ಥೆಯಿಂದ ಸಾಲ ಪಡೆದಿದ್ದರು ಎಂದರೆ ಸರಿ. ಸದರಿ ಸಾಲ ಪಡೆಯುವ ಸಮಯದಲ್ಲಿ ಗುರುಪ್ರಸಾದರವರು ದಾವಾಸ್ವತ್ತಿನ ಮೂಲ ದಾಖಲಾತಿಗಳನ್ನು 6 ಮತ್ತು 7 ನೇ ಪ್ರತಿವಾದಿಯರ ಬಳಿ ಅಡಮಾನ ಮಾಡಿದ್ದರು ಎಂದರೆ ಸರಿ. ಆ ಸಂದರ್ಭದಲ್ಲಿ ಗುರುಪ್ರಸಾದರವರು 'ಡಿಪಾಜಿಟ್ ಆಫ್ ಟೈಟಲ್ ಡೀಡ್ಸ' ಬರೆದುಕೊಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ. ಗುರುಪ್ರಸಾದರವರು ಸೂಕ್ತ ಸಮಯದಲ್ಲಿ ಸಾಲ ಮರುಪಾವತಿಸದ ಕಾರಣ 6 ಮತ್ತು 7 ನೇ ಪ್ರತಿವಾದಿಯರು ಆತನ ವಿರುದ್ಧ ದಾವೆ (arbitration suit) ದಾಖಲಿಸಿದ್ದರು ಎಂದರೆ ನಂತರ ತಿಳಿದು ಬಂತು. ಸದರಿ ದಾವೆಯಲ್ಲಿನ ತೀರ್ಪಿನ ಅನುಗುಣವಾಗಿ ಜಾರಿ ಅರ್ಜಿ ಸಂಖ್ಯೆ 1928/2016 ಮತ್ತು 4222/2018 ಯನ್ನು ದಾಖಲಿಸಿದ್ದಾರೆ ಎಂದರೆ ಸರಿ. ಆದ ಕಾರಣ ದಾವಾಸ್ವತ್ತಿನ ಮೇಲೆ 6 ಮತ್ತು 7 ನೇ ಪ್ರತಿವಾದಿಯರಿಗೆ ಪ್ರಥಮ ಹಕ್ಕು ಇರುತ್ತದೆ ಎಂದರೆ ನನಗೆ ಹಕ್ಕು ಇದೆ. ಗುರುಪ್ರಸಾದರವರ ಪತ್ನಿ ಮತ್ತು ಮಕ್ಕಳಿಗೆ ದಾವಾಸ್ವತ್ತನ್ನು ಮಾರಾಟ ಮಾಡುವ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು, ಗುರುಪ್ರಸಾದರವರು ಮೃತರಾದ ನಂತರ ಸ್ವತ್ತನ್ನು ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ.

5. 6 ಮತ್ತು 7 ನೇ ಪ್ರತಿವಾದಿ ಹಣಕಾಸು ಸಂಸ್ಥೆಗಳಿಗೆ ಮೋಸ ಮಾಡುವ ಉದ್ದೇಶದಿಂದ ನಾನು ಮತ್ತು 3 ರಿಂದ 5 ನೇ ಪ್ರತಿವಾದಿಗಳು ಸೇರಿ ನಿಪಿ-2 -ಕ್ರಯಪತ್ರವನ್ನು ಸೃಷ್ಟಿಸಿಕೊಂಡಿದ್ದೇವೆ

ಎಂದರೆ ಸರಿಯಲ್ಲ. ನಿಪಿ-2-ಕ್ರಯಪತ್ರದ 7 ನೇ ಪುಟದಲ್ಲಿ ದಾವಾಸ್ವತ್ತನ್ನು ಅಡಮಾನ ಮಾಡಿಲ್ಲ ಮತ್ತು ಸದರಿ ಸ್ವತ್ತಿನ ಮೇಲೆ ಯಾವುದೇ ಋಣಭಾರ ಇಲ್ಲ ಎಂದು ತಪ್ಪಾಗಿ ಬರೆಯಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿಪಿ-2-ಕ್ರಯಪತ್ರ ಬರೆದುಕೊಡುವ ಸಂದರ್ಭದಲ್ಲಿ ದಾವಾಸ್ವತ್ತಿನಲ್ಲಿ ಬಾಡಿಗೆದಾರರು ಇದ್ದರು. ದಾವಾಸ್ವತ್ತನ್ನು ಖರೀದಿಸುವ ಪೂರ್ವದಲ್ಲಿ ಕಾನೂನು ಅಭಿಪ್ರಾಯ ಪಡೆದಿದ್ದಾರೆಯೇ ಎಂದರೆ ನನಗೆ ಮಾಹಿತಿ ಇಲ್ಲ.

**ಪಾಟೀ ಸವಾಲುಃ 1, 3 ರಿಂದ 5 ನೇ ಪ್ರತಿವಾದಿ ಪರ ವಕೀಲರಿಂದ :**

( 1, 3 ರಿಂದ 5 ನೇ ಪ್ರತಿವಾದಿಯರು ಗೈರು ಹಾಜರಾಗಿರುತ್ತಾರೆ. ಆದೇಶ ಪುಟಗಳನ್ನು ಪರಿಶೀಲಿಸಲಾಯಿತು. ಸದರಿ ಪ್ರತಿವಾದಿಯರು ಲಿಖಿತ ಹೇಳಿಕೆ ಸಲ್ಲಿಸಿರುವುದಿಲ್ಲ. ಪಾಟೀ ಸವಾಲು ಮುಂದೂಡಲು ಯಾವುದೇ ಸಕಾರಣಗಳು ಕಂಡುಬಂದಿರುವುದಿಲ್ಲ. ಕಾರಣ 1, 3 ರಿಂದ 5 ನೇ ಪರ ಯಾವುದೇ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)

**ಪಾಟೀ ಸವಾಲುಃ ಶ್ರೀ ಎಸ್.ವಿ. 2 ನೇ ಪ್ರತಿವಾದಿ ಪರ ವಕೀಲರಿಂದ :**

( 2 ನೇ ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿರುತ್ತಾರೆ. ಅನುಮತಿಸಲಾಯಿತು)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)
ಓ.ಹೇ.ಕೇ. ಸರಿ ಇದೆ

(ಕಲ್ಪನಾ ಎಂ.ಎಸ್.)
64 ನೇ ಎ.ಸಿ.ಸಿ ಮತ್ತು ಎಸ್.ಜೆ,
ಬೆಂಗಳೂರು ನಗರ (ಸಿಸಿಹೆಚ್-65).

**<u>ದಿನಾಂಕ 18.06.2026 ರಂದು ಸಾಕ್ಷಿ ಹಾಜರಿರುತ್ತಾರೆ. ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಪ್ರತಿವಾದಿಯರ ಪರ ವಕೀಲರಿಂದ :</u>**

( ಪ್ರಕರಣವನ್ನು ಎರಡು ಬಾರಿ ಕರೆಯಿಸಲಾಯಿತು. ಪ್ರತಿವಾದಿಯರು ಮತ್ತು ಪ್ರತಿವಾದಿಯರ ಪರ ವಕೀಲರು ಗೈರು ಹಾಜರಾಗಿರುತ್ತಾರೆ. ವಾದಿ ಪರ ವಕೀಲರು ಪ್ರಕರಣವನ್ನು ಮುಂದೂಡಲು ತಕರಾರು ಒಡ್ಡಿರುತ್ತಾರೆ. ಆದೇಶ ಪುಟಗಳನ್ನು ಪರಿಶೀಲಿಸಲಾಯಿತು. ಪಾಟೀ ಸವಾಲಿಗೆ ಈಗಾಗಲೇ ಸಾಕಷ್ಟು ಕಾಲಾವಕಾಶ ನೀಡಲಾಗಿರುತ್ತದೆ. ಸಾಕ್ಷಿ ಭತ್ಯೆ ಸಹ ಪಾವತಿಸಿರುವುದಿಲ್ಲ. ಪಾಟೀ ಸವಾಲು ಮುಂದೂಡಲು ಯಾವುದೇ ಸಕಾರಣಗಳು ಕಂಡುಬಂದಿರುವುದಿಲ್ಲ. ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)

**<u>ಮರು ವಿಚಾರಣೆಃ ಇಲ್ಲ</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ. ಸರಿ ಇದೆ

(ತಾರಕೇಶ್ವರಗೌಡ ಪಾಟೀಲ)
64 ನೇ ಎ.ಸಿ.ಸಿ ಮತ್ತು ಎಸ್.ಜೆ,
ಬೆಂಗಳೂರು ನಗರ (ಸಿಸಿಹೆಚ್-65).

**ಮಧ್ಯಂತರ ಅರ್ಜಿಯ ಆದೇಶದನ್ವಯ ದಿನಾಂಕ 10.07.2026 ರಂದು ಸಾಕ್ಷಿ ಹಾಜರಿರುತ್ತಾರೆ. ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀಮತಿ ಪಿಎಸ್ 2 ನೇ ಪ್ರತಿವಾದಿ ಪರ ವಕೀಲರಿಂದ :**

1. ನನಗೆ ಓದಲು ಬರೆಯಲು ಬರುತ್ತದೆ. ನಾನು ಬಿಕಾಂ ವರೆಗೆ ಓದಿದ್ದೇನೆ. ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಬರೆದಿರುವ ಎಲ್ಲ ಅಂಶಗಳು ನನಗೆ ಗೊತ್ತು. 1 ನೇ ಪ್ರತಿವಾದಿ ನನ್ನ ತಾಯಿ. ಆಕೆಗೆ 7 ಜನ ಮಕ್ಕಳು. ಆಕೆ ನಿವೃತ್ತ ಶಿಕ್ಷಕಿಯಾಗಿದ್ದಳು. 1 ನೇ ಪ್ರತಿವಾದಿ ನನ್ನ ತಾಯಿ ಅಂತಾ ತೋರಿಸಲು ನ್ಯಾಯಾಲಯದ ಮುಂದೆ ವಂಶವೃಕ್ಷವನ್ನು ಹಾಜರು ಮಾಡಬಹುದೇ ಎಂದರೆ ಮಾಡಬಹುದು.

2. 2 ನೇ ಪ್ರತಿವಾದಿ ಬಾಡಿಗೆ ಆಧಾರದ ಮೇರೆಗೆ ವಾಸವಾಗಿದ್ದು, ಅದರಲ್ಲಿ ಸ್ವಾಧೀನ ಬೇಕಾಗಿದ್ದರಿಂದ ಕಕ್ಷಿಗಾರರನ್ನಾಗಿ ಮಾಡಿದ್ದೇನೆ. ನಾನು ಸ್ವತ್ತು ಖರೀದಿಸುವ ಪೂರ್ವದಲ್ಲಿ 2 ನೇ ಪ್ರತಿವಾದಿಯನ್ನು ಸ್ವತ್ತಿನಲ್ಲಿ ಯಾವ ಆಧಾರದ ಮೇಲೆ ವಾಸವಿದ್ದೀರಿ ಎಂದು ಕೇಳಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಕೇಳಿದ್ದೇನೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ದಾವಾಸ್ವತ್ತನ್ನು ಹೇಗೆ ಖರೀದಿ ಮಾಡಿದ್ದಾರೆ ಅಂತಾ ಗೊತ್ತು. ಗುರುಪ್ರಸಾದ ದಾವಾಸ್ವತ್ತನ್ನು ಹೇಗೆ ಪಡೆದರು ಎಂದು ನನಗೆ ವೈಯಕ್ತಿಕ ಮಾಹಿತಿ ಇದೆ. ಗುರುಪ್ರಸಾದ ಪಡೆದ ಮೂಲ ಖರೀದಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. 3 ರಿಂದ 5 ನೇ ಪ್ರತಿವಾದಿಯರಿಗೆ ಕಾನೂನುಬದ್ಧ ಹಕ್ಕು ಇದೆಯಾ ಅಂತಾ ನಾನು ಖುದ್ದಾಗಿ ಪರಿಶೀಲನೆ ಮಾಡಿದ್ದೇನೆ. 3 ರಿಂದ 5 ನೇ ಪ್ರತಿವಾದಿಯರು

ದಾವಾಸ್ವತ್ತಿನ ಮೇಲೆ ಕಾನೂನುಬದ್ಧವಾಗಿ ಸ್ವಾಧೀನದಲ್ಲಿದ್ದಾರಾ ಅಂತಾ ನಾನು ಖರೀದಿ ಪೂರ್ವದಲ್ಲಿ ಪರಿಶೀಲನೆ ಮಾಡಿದ್ದೇನೆ. 3 ರಿಂದ 5 ನೇ ಪ್ರತಿವಾದಿಯರಿಗೆ ದಾವಾಸ್ವತ್ತಿನ ಮೇಲೆ ಯಾವುದೇ ತೆರನಾದ ಹಕ್ಕು ಮತ್ತು ಸ್ವಾಧೀನ ಇರಲಿಲ್ಲ ಎಂದರೆ ಸರಿಯಲ್ಲ.

3. ದಾವಾಸ್ವತ್ತನ್ನು ಖರೀದಿ ಮಾಡುವ ಪೂರ್ವದಲ್ಲಿ ಕಾನೂನು ಅಭಿಪ್ರಾಯ ಪಡೆದಿದ್ದೆ. ಆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನನಗೆ ಈಗ ತೋರಿಸಿದ ನಿಪಿ-1 ರಿಂದ 8 ದಾಖಲೆಗಳಲ್ಲಿ ಸದರಿ ಕಾನೂನು ಅಭಿಪ್ರಾಯ ಇದೆಯಾ ಎಂಬ ಪ್ರಶ್ನೆಗೆ ಸಾಕ್ಷಿ ದಾಖಲೆಗಳನ್ನು ನೋಡಿ ಇಲ್ಲ ಎಂದು ನುಡಿಯುತ್ತಾರೆ. ಕಾನೂನು ಅಭಿಪ್ರಾಯದ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ. ನಾನು ಯಾವುದೇ ಕಾನೂನು ಅಭಿಪ್ರಾಯ ಪಡೆದಿರಲಿಲ್ಲ ಎಂದರೆ ಸರಿಯಲ್ಲ. ಗುರುಪ್ರಸಾದರವರು ದಾವಾ ಆಸ್ತಿಯನ್ನು ಸನ್ 2001 ನೇ ಸಾಲಿನಲ್ಲಿಯೇ 2 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಖರೀದಿ ನಾತೆಯಿಂದ 2 ನೇ ಪ್ರತಿವಾದಿ ಸನ್ 2001 ನೇ ಸಾಲಿನಿಂದ ಕುಟುಂಬ ಸಮೇತ ದಾವಾಸ್ವತ್ತಿನಲ್ಲಿ ಕಾನೂನು ಬದ್ಧವಾಗಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಆ ವಿಷಯ ನನಗೆ ಮೊದಲೇ ಗೊತ್ತಿತ್ತು ಎಂದರೆ ಸರಿಯಲ್ಲ. ನಾನು 3 ನೇ ಪ್ರತಿವಾದಿಯೊಂದಿಗೆ ಶಾಮೀಲಾಗಿ 2 ನೇ ಪ್ರತಿವಾದಿಗೆ ಮೋಸ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ. ಸರಿ ಇದೆ

(ತಾರಕೇಶ್ವರಗೌಡ ಪಾಟೀಲ)
**64** ನೇ ಎ.ಸಿ.ಸಿ ಮತ್ತು ಎಸ್.ಜೆ,
ಬೆಂಗಳೂರು ನಗರ (ಸಿಸಿಹೆಚ್-**65**).